
# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 27

ಸ್ವಾಮಿ ನಿತ್ಯಸ್ಥಾನಂದ



### ಎರಡು ವಿಧದ ಯೋಗಿಗಳು

**ಶ್ರೀರಾಮಕೃಷ್ಣರು:** ‘‘ಯೋಗಿಗಳಲ್ಲಿ ಎರಡು ವಿಧ – ಬಹೂದಕ, ಕುಟೀಚಕ. ಯಾವ ಸಾಧು ಇನ್ನೂ ತೀರ್ಥಸ್ಥಳಗಳಿಗೆ ಹೋಗುತ್ತಲೇ ಇದ್ದಾನೋ, ಯಾರ ಹೃದಯದಲ್ಲಿ ಇನ್ನೂ ಶಾಂತಿ ಎಂಬುದು ನೆಲೆಸಿಲ್ಲವೋ ಆತನೇ ಬಹೂದಕ. ಆದರೆ ಯಾರು ಎಲ್ಲ ತೀರ್ಥಯಾತ್ರೆಗಳನ್ನು ಮುಗಿಸಿ ಮನಸ್ಸನ್ನು ಪ್ರಶಾಂತ ಮಾಡಿಕೊಂಡಿದ್ದಾನೋ ಆತನೇ ಕುಟೀಚಕ. ಆತ ಯಾವುದಾದರೂ ಒಂದು ಜಾಗದಲ್ಲಿ ಕುಟೀರ ಕಟ್ಟಿಕೊಂಡು ಇದ್ದುಬಿಡುತ್ತಾನೆ. ಮತ್ತೆ ಅವನು ಸಂಚಾರಕ್ಕೆ ಹೊರಡುವುದಿಲ್ಲ. ಇರುವ ಜಾಗದಲ್ಲೇ ಆತ ಆನಂದದಿಂದಿರುತ್ತಾನೆ. ಆತನಿಗೆ ಇನ್ನು ತೀರ್ಥಯಾತ್ರೆಯ ಆವಶ್ಯಕತೆ ತೋರಿಬರುವುದಿಲ್ಲ. ಒಂದು ಪಕ್ಷ ಅವನು ತೀರ್ಥಯಾತ್ರೆಗೆ ಹೋದರೂ ಅದು ಕೇವಲ ಉದ್ದೀಪನಕ್ಕಾಗಿಯೇ.’’

ಇದನ್ನೇ ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ವಿವಿಧ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಓದಿಯಾದ ಮೇಲೆ ಯಾವುದೊ ಒಂದು ಗ್ರಂಥವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವುದು. ಶ್ರೀರಾಮಕೃಷ್ಣ ಭಕ್ತರು ಕೊನೆಯಲ್ಲಿ ‘‘ಶ್ರೀರಾಮಕೃಷ್ಣ ವಚನವೇದ’’ವೊಂದೇ ಸಾಕಪ್ಪ ಎಂದು ಅದರಲ್ಲಿಯೇ ಅವರ ಓದು ನೆಲೆಯೂರಿಬಿಡುತ್ತದೆ. ಇನ್ನೊಂದು ಅರ್ಥ: ಮೊದಲು ಅನೇಕ ಮಾರ್ಗಗಳ ರುಚಿನೋಡಿ ಕೊನೆಯಲ್ಲಿ ಒಂದು ಮಾರ್ಗದಲ್ಲಿ ನೆಲೆನಿಲ್ಲುವುದು. ಕೀಬಂಚಿನಲ್ಲಿರುವ ಅನೇಕ ಕೀಗಳನ್ನು ಟ್ರೈ ಮಾಡಿದ ಮೇಲೆ ಒಂದು ಕೀಯಿಂದ ಬೀಗ ತೆಗೆಯಲ್ಪಡುವಂತೆ. ಜ್ಞಾನಾನ್ವೇಷಣೆ ಮಾಡುತ್ತ ಹೋಗುವುದು ಬಹೂದಕ ಸ್ಥಿತಿ, ಕೊನೆಯಲ್ಲಿ ಏನೂ ತಿಳಿಯಲಾಗದು ಎಂದು ಮೌನವಾಂತ ಸ್ಥಿತಿ ಕುಟೀಚಕ ಎನ್ನಬಹುದು. ಕೋಲ್‌ರಿಡ್ಜ್ (Coleridge) ಹೇಳುತ್ತಾರೆ: ‘‘ಎಲ್ಲ ಜ್ಞಾನವೂ ಆಶ್ಚರ್ಯದಲ್ಲಿ ಪ್ರಾರಂಭವಾಗಿ ಆಶ್ಚರ್ಯದಲ್ಲಿ ಕೊನೆಗೊಳ್ಳುತ್ತದೆ. ಆದರೆ ಮೊದಲನೆಯ ಆಶ್ಚರ್ಯವು ಅಜ್ಞಾನದ ಕೂಸು, ಎರಡನೆಯದಾದರೋ ಆರಾಧನೆಯ ತಂದೆ.’’ (All knowledge begins and ends with wonder. But the first wonder is the Child of ignorance, the second wonder is the Parent of adoration).

ವಿದ್ಯಾರಣ್ಯರ ‘ಜೀವನ್ಮುಕ್ತಿ ವಿವೇಕ’ದ ಪ್ರಕಾರ ಕುಟೀಚಕನ ಸ್ಥಿತಿ ಮೊದಲನೆಯ ಹಂತ, ಹಾಗೂ ಬಹೂದಕನದು ಎರಡನೆಯ ಹಂತ. ಕುಟೀಚಕನು ಒಂದು ಕಡೆ ಇದ್ದು ತಪಸ್ಸು ಮಾಡಿ ಮನಸ್ಸನ್ನು ಗಟ್ಟಿ ಮಾಡಿಕೊಳ್ಳುತ್ತಾನೆ, ಯಾವುದೇ ದ್ವಂದ್ವವನ್ನು ಸಹಿಸುವ, ಯಾವುದೇ ಪ್ರಲೋಭನೆಗೂ ಒಳಗಾಗದ ಮಾನಸಿಕ ದೃಢತೆಯನ್ನು ಪಡೆಯುತ್ತಾನೆ. ಅನಂತರ ಬಹೂದಕನಾಗಿ, ಪೂರ್ಣ ಭಗವದಾಶ್ರಯ ಹೊಂದಿ ಅಲೆದಾಡುತ್ತಾನೆ. ಇದು ಅವನು ಕುಟೀಚಕನಾಗಿ ಮಾಡಿದ ತಪಸ್ಸಿನ ಪರೀಕ್ಷೆಯ ಸಮಯ.

### ಅನಂತ ಸತ್ಯದೆಡೆಗೆ ಅನಂತ ಮಾರ್ಗಗಳು

**ಶ್ರೀರಾಮಕೃಷ್ಣರು:** ‘‘ನಾನು ಪ್ರತಿಯೊಂದು ಧರ್ಮವನ್ನು –ಹಿಂದೂಧರ್ಮ, ಮಹಮ್ಮದೀಯ ಧರ್ಮ, ಕ್ರೈಸ್ತಧರ್ಮ– ಅನುಸರಿಸಿ ನೋಡಬೇಕಾಯಿತು. ಜೊತೆಗೆ ಶಾಕ್ತ, ವೈಷ್ಣವ, ವೇದಾಂತ ಈ ಮಾರ್ಗಗಳಲ್ಲೂ ನಡೆಯಬೇಕಾಗಿ ಬಂತು. ಇರತಕ್ಕವನು ಭಗವಂತನೊಬ್ಬನೆ–ಆತನ ಕಡೆ ಎಲ್ಲರೂ ಬರುತ್ತಿದ್ದಾರೆ, ಆದರೆ ವಿವಿಧ ಮಾರ್ಗಗಳಿಂದ, ಅಷ್ಟೇ.’’ ಇಲ್ಲಿ ಗಮನಿಸ

ಬೇಕಾದ ಪದ 'ಬರುತ್ತಿದ್ದಾರೆ' ಎಂಬುದು. ಶ್ರೀರಾಮಕೃಷ್ಣರು ಆಗಲೆ ಭಗವಂತನೊಡನಿರುವರು, ಅಷ್ಟೇಕೆ, ಭಗವಂತನೇ ಆಗಿರುವರು. ಆದ್ದರಿಂದಲೇ ಭಗವಂತನೆಡೆಗೆ 'ಬರುತ್ತಿದ್ದಾರೆ' ಎಂದು ಹೇಳಿದರು. ನಾವಾದರೂ ಭಗವಂತನಿಂದ ದೂರವಿರುವುದರಿಂದ 'ಹೋಗುತ್ತಿದ್ದಾರೆ' ಎನ್ನುತ್ತೇವೆ. ಬೆಂಗಳೂರಿನಲ್ಲಿ ಇರುವವರು ಎಲ್ಲರೂ ಬೆಂಗಳೂರಿನ ಕಡೆ ಬರುತ್ತಿದ್ದಾರೆ ಎಂದು ಹೇಳಬಹುದು. ಆದರೆ ಬೆಂಗಳೂರಿನಿಂದ ದೂರವಿರುವವರು ಎಲ್ಲರೂ ಬೆಂಗಳೂರಿನ ಕಡೆ ಹೋಗುತ್ತಿದ್ದಾರೆ ಎಂದೇ ಹೇಳಬೇಕಾಗುತ್ತದೆ.

ವೇನ್ ಟೀಸ್‌ಡೇಲ್ (Wayne Teasdale) ಎಂಬುವವರು ಧರ್ಮ ಸತ್ಯವನ್ನು ಒಂದು ಪರ್ವತಕ್ಕೆ ಹೋಲಿಸುತ್ತಾರೆ. (Mountain of Truth). ಅದರ ಶಿಖರ ಒಂದೇ. ಶಿಖರ ತಲುಪಲು ಅನೇಕ ಮಾರ್ಗಗಳಿವೆ. ಒಂದೊಂದು ಮಾರ್ಗವೂ ಬೇರೆ ಬೇರೆ ದಿಕ್ಕಿನಲ್ಲಿರುತ್ತದೆ, ಬೇರೆ ಬೇರೆ ರೀತಿಯಲ್ಲಿರುತ್ತದೆ. ಪರ್ವತದ ತುದಿಗೆ ಹತ್ತಿರವಾದಷ್ಟೂ ಮಾರ್ಗಗಳು ಒಂದಕ್ಕೊಂದು ಹತ್ತಿರವಾಗುತ್ತಾ ಬರುತ್ತವೆ. ಶಿಖರವನ್ನು ಮುಟ್ಟಿದಾಗ ಎಲ್ಲವೂ ಒಂದಾಗಿಬಿಡುತ್ತವೆ. ಅಲ್ಲಿಂದಿಳಿದ ಮೇಲೆ ಒಬ್ಬೊಬ್ಬರೂ ತಮ್ಮ ಭಾಷೆ, ಸಂಸ್ಕೃತಿ, ರೀತಿನೀತಿ ಇವುಗಳಿಗೆ ಅನುಗುಣವಾಗಿ ತಮ್ಮ ಅನುಭವವನ್ನು ಬೇರೆ ಬೇರೆಯಾಗಿ ವರ್ಣಿಸಬಹುದು. ಆದರೆ ಎಲ್ಲರ ಅನುಭವವೂ ಒಂದೇ. ಧರ್ಮದ ಬಗೆಗಿನ ಈ ರೀತಿಯ ಕಲ್ಪನೆಯನ್ನು 'interspirituality' ಎಂದು ಕರೆಯಲಾಗಿದೆ. (ನೋಡಿ: 'Sacred Knowldge' by William A. Richard, P.42.)

ಈ ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಎರಡು ಸಿದ್ಧಾಂತಗಳಿವೆ: ಪೆರೆನಿಯಲಿಸಂ (Perenialism) ಎಂದು ಕರೆಯಲ್ಪಡುವ ಮೊದಲನೆಯ ಸಿದ್ಧಾಂತದ ಪ್ರಕಾರ, ಆಗಲೇ ವಿವರಿಸಿದಂತೆ, ಅನುಭವ ಒಂದೇ, ಆದರೆ ವಿವರಣೆ ಬೇರೆ ಬೇರೆ. ಸಗುಣ ದೇವರನ್ನು ನಂಬುವ ಮತ್ತು ನಿರ್ಗುಣ ದೇವರನ್ನು ನಂಬುವ ಅನುಭಾವಿಗಳ (Mystics) ಅನುಭವವು ಒಂದೇ ರೀತಿಯದಾದರೂ ಅವರವರ ಧಾರ್ಮಿಕ ಸಂಪ್ರದಾಯಕ್ಕೆ, ಅವರವರ ಸಾಂಸ್ಕೃತಿಕ ಹಿನ್ನೆಲೆಗೆ ಅನುಸಾರವಾಗಿ ಅವರು ತಮ್ಮ ತಮ್ಮ ಅತೀತಾನುಭವವನ್ನು ಬೇರೆ ಬೇರೆಯಾಗಿ ವಿವರಿಸುತ್ತಾರೆ. ವಿವರಿಸಲಾಗದುದನ್ನು ವಿವರಿಸಲು ಹೋದಾಗ ಅದು ಅನೇಕ ಸಿದ್ಧಾಂತಗಳಿಗೆ ಮತಭೇಧಗಳಿಗೆ ಎಡೆಮಾಡಿಕೊಡುವುದು ಸ್ವಾಭಾವಿಕ.

ಇನ್ನೊಂದು ಸಿದ್ಧಾಂತದ (Constructivism) ಪ್ರಕಾರ ಸತ್ಯವು ಒಂದೇ ಆದರೂ ಅದನ್ನು ನೋಡುವ ಮತ್ತು ಅನುಭವಿಸುವ ರೀತಿ ಬೇರೆ ಬೇರೆಯಾಗುತ್ತದೆ. ಈ ಸಿದ್ಧಾಂತಗಳ ಪ್ರಕಾರ ಎಲ್ಲ ಅನುಭಾವಿಗಳ ಅನುಭವವೂ ಒಂದೇ ಆಗಿರುವುದಿಲ್ಲ. ಅನುಭಾವಿಗಳು ತಾವು ಬೆಳೆದು ಬಂದ ಧಾರ್ಮಿಕ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಆ ಆತ್ಯಂತಿಕ ಸತ್ಯವನ್ನು ಅನುಭವಿಸುತ್ತಾರೆ. ಆದ್ದರಿಂದ ಅವರ ಅನುಭವಗಳಲ್ಲಿಯೂ ವ್ಯತ್ಯಾಸವಿರುತ್ತದೆ – ನೀರು ವಿವಿಧ ಪಾತ್ರೆಗಳ ಆಕಾರವನ್ನು ಪಡೆಯುವಂತೆ. ಅನುಭವಕ್ಕೆ ಮುಂಚೆ ಅನುಭಾವಿಯ ಧಾರ್ಮಿಕ ಭಾವನೆಗಳು, ನಂಬಿಕೆಗಳು ಏನೇನಿದ್ದವೋ ಅವು ಅವನ ಅನುಭವಕ್ಕೆ ತಮ್ಮದೇ ಆದ ರೂಪವನ್ನು ಕೊಡುತ್ತವೆ ಎಂಬುದು ಈ ಸಿದ್ಧಾಂತಿಗಳ ಅಭಿಪ್ರಾಯ. (ನೋಡಿ 'Infinite paths to Infinite Reality', by Ayon Maharaj, P.154-155). **ಯೇ ಯಥಾ ಮಾಂ ಪ್ರಪದ್ಯಂತೇ ತಾಂ ತಥೈವ ಭಜಾಮ್ಯಹಂ ।** 'ಯಾರು ಯಾವ ರೀತಿ ನನ್ನನ್ನು ಚಿಂತಿಸುತ್ತಾರೊ ಅದ ರಂತೆಯೇ ನಾನು ಅವರಿಗೆ ತೋರಿಕೊಳ್ಳುತ್ತೇನೆ,' ಎಂಬ ಭಗವದ್ವಾಣಿಯನ್ನು ಎರಡನೆಯ ಸಿದ್ಧಾಂತವು ಪ್ರತಿಬಿಂಬಿಸುತ್ತದೆ.

### ತೀರ್ಥಸ್ಥಳದಲ್ಲಿ ಆಧ್ಯಾತ್ಮಿಕ ಉದ್ದೀಪನ

ಶ್ರೀರಾಮಕೃಷ್ಣರು: ''ತೀರ್ಥಯಾತ್ರೆಗೆ ಹೋಗಿದ್ದಾಗ ನನಗೆ ಒಮ್ಮೊಮ್ಮೆ ಬಹಳ ಕಷ್ಟವಾಗುತ್ತಿತ್ತು. ಕಾಶಿಯಲ್ಲಿ ಮಥುರ ಬಾಬುವಿನ ಸಂಗಡ ರಾಜಬಾಬುವಿನ ಬೈಠಕ್‌ಖಾನೆಗೆ ಹೋಗಿದ್ದೆ. ಅಲ್ಲಿ ಅವರು ಪ್ರಾಪಂಚಿಕ ಮಾತುಕತೆ ಶುರುಮಾಡಿದರು – ಹಣ, ಜಮೀನ್ದಾರಿ ಇತ್ಯಾದಿಗಳ ವಿಷಯವಾಗಿ. ಅವರ ಮಾತು ಕೇಳಿ ಅಳಲಾರಂಭಿಸಿದೆ. ಆಗ ಭಗವತಿಗೆ ಹೇಳಿದೆ: 'ತಾಯೆ! ನನ್ನನ್ನು ಎಲ್ಲಿಗೆ ಕರೆದುಕೊಂಡು ಬಂದಿದ್ದೀಯೆ! ನಾನು ದಕ್ಷಿಣೇಶ್ವರದಲ್ಲಿ ಸುಖವಾಗಿ ಇದ್ದೆನಲ್ಲ' ಎಂಬುದಾಗಿ. ಪ್ರಯಾಗದಲ್ಲಿಯೂ ಎಲ್ಲೆಲ್ಲೂ ಇರುವ ರೀತಿಯಲ್ಲೇ ನೋಡಿದೆ – ಅದೇ ತರದ ಕೊಳ, ಅದೇ ಬಗೆಯ ಹುಲ್ಲು, ಅದೇ ವಿಧದ ಮರಗಿಡಗಳು, ಅದೇ ರೀತಿಯ ಹುಣಸೆ ಎಲೆ.''

ಹೊರಗಡೆ ಎಷ್ಟೇ ಪ್ರಾಪಂಚಿಕ ವಾತಾವರಣವಿದ್ದರೂ ಆಳದಲ್ಲಿ ಆಧ್ಯಾತ್ಮಿಕ ತರಂಗಗಳಿರುತ್ತವೆ. ಮಹಾಪುರುಷರು ಆಳಕ್ಕೆ ಹೋಗಿ ಅದನ್ನು ಅನುಭವಿಸಬಲ್ಲರು. ಇದು ಅನೇಕ ಐತಿಹಾಸಿಕ ಸತ್ಯಗಳನ್ನು ಇತಿಹಾಸಜ್ಞರು ಉತ್ಖನನದ ಮೂಲಕ ಕಂಡುಹಿಡಿಯುವಂತೆ. ಎಲ್ಲ ಕಡೆಯೂ ಪ್ರಾಪಂಚಿಕತೆ ಇದ್ದೇ ಇರುತ್ತದೆ. ಅದಿಲ್ಲದ ಸ್ಥಳದಲ್ಲಿ ಸಾಧನೆ ಮಾಡುತ್ತೇನೆ ಎಂದು ಭಾವಿಸಿದರೆ ಈ ಕೆಳಗಿನ ಶ್ಲೋಕದಲ್ಲಿ ಬರುವ ವ್ಯಕ್ತಿಯ ಸ್ಥಿತಿಯಾಗುತ್ತದೆ.

**ಯ ಇಚ್ಛತಿ ಹರಿಂ ಸ್ಮರ್ತುಂ ವ್ಯಾಪಾರಾಸ್ತಗತೇರಪಿ ।**
**ಸಮುದ್ರೇ ಶಾಂತಕಲ್ಲೋಲೇ ಸ್ನಾತುಮಿಚ್ಛತಿ ದುರ್ಮತಿಃ ॥**

''ಎಲ್ಲ ಚಟುವಟಿಕೆಗಳೂ ನಿಂತ ಮೇಲೆ ಹರಿಯನ್ನು ಸ್ಮರಿಸಲು ಇಚ್ಛಿಸುವವನು, ಸಮುದ್ರ ಅಲೆಗಳೆಲ್ಲ ನಿಂತಮೇಲೆ ಸ್ನಾನ ಮಾಡುತ್ತೇನೆ ಎಂದು ನಿರ್ಧರಿಸುವ ಮೂರ್ಖನಿಗೆ ಸಮಾನ.''

**ಶ್ರೀರಾಮಕೃಷ್ಣರು:** ''ಆದರೆ ತೀರ್ಥಸ್ಥಳಗಳಲ್ಲಿ ಉದ್ದೀಪನವಾಗುವುದೇನೋ ನಿಜ. ಮಥುರಬಾಬುವಿನೊಡನೆ ಬೃಂದಾವನಕ್ಕೆ ಹೋಗಿದ್ದೆ. ಆತನ ಮನೆಯ ಹೆಂಗಸರೂ ಬಂದಿದ್ದರು. ಹೃದಯನೂ ಬಂದಿದ್ದ. ಕಾಲಿಯ ದಮನ ಘಟ್ಟವನ್ನು ನೋಡಿ

ದೊಡನೆಯೇ ನನಗೆ ಉದ್ದೀಪನವುಂಟಾಗಿಬಿಡುತ್ತಿತ್ತು. ಸಂಪೂರ್ಣ ಭಾವಪರವಶನಾಗಿಬಿಡುತ್ತಿದ್ದೆ. ಹೃದು ಮಕ್ಕಳನ್ನು ಹಿಡಿದು ಸ್ನಾನ ಮಾಡಿಸುವ ರೀತಿಯಲ್ಲಿ ನನಗೆ ಅಲ್ಲಿ ಸ್ನಾನ ಮಾಡಿಸುತ್ತಿದ್ದ.''

ಬೃಂದಾವನದಲ್ಲಿ ತಮಗೆ ಉದ್ದೀಪನವಾದ ಅನೇಕ ಸಂದರ್ಭಗಳನ್ನು ಶ್ರೀರಾಮಕೃಷ್ಣರು ನೆನೆಪಿಸಿಕೊಳ್ಳುತ್ತಾರೆ. ಶ್ರೀರಾಮಕೃಷ್ಣರ ಮನಸ್ಸು ಕರ್ಪೂರದಂತೆ – ಸ್ವಲ್ಪ ಅಧ್ಯಾತ್ಮದ ಕಿಡಿ ತಗಲಿದರೆ ಸಾಕು, ಬುಗ್ಗೆಂದು ಹತ್ತಿಕೊಂಡುಬಿಡುತ್ತದೆ. ಕರ್ಪೂರವು ಹೇಗೆ ಪರಿಮಳದಿಂದ ಕೂಡಿರುತ್ತದೆಯೋ ಹಾಗೆಯೇ ಶ್ರೀರಾಮಕೃಷ್ಣರ ಮನಸ್ಸು ದಿವ್ಯಸುಗಂಧದಿಂದ ಕೂಡಿತ್ತು. ಭೂಗರ್ಭದಲ್ಲಿರುವ ನೀರನ್ನು ಕಂಡುಹಿಡಿಯುವವರು ಎಲ್ಲಿ ತೋಡಿದರೆ ನೀರು ದೊರೆಯುತ್ತದೆ ಎಂದು ಗುರುತಿಸುತ್ತಾರೆ, ಹಾಗೆಯೇ ಶ್ರೀರಾಮಕೃಷ್ಣರು ತಮಗಾಗುವ ಆಧ್ಯಾತ್ಮಿಕ ಉದ್ದೀಪನದ ಆಧಾರದ ಮೇಲೆ ತೀರ್ಥಸ್ಥಳಗಳನ್ನು ಗುರುತಿಸಬಲ್ಲವರಾಗಿದ್ದರು.

ಎಲ್ಲರೂ ಆಧ್ಯಾತ್ಮಿಕ ಪ್ರಯೋಜನಕ್ಕಾಗಿ ತೀರ್ಥಸ್ಥಳ ದೇವಾಲಯಗಳಿಗೆ ಹೋಗುವುದಲ್ಲ–ಬೇರೆ ಬೇರೆ ಅನೇಕ ಉದ್ದೇಶಗಳಿರುತ್ತವೆ. ವ್ಯಾಪಾರಿಗಳು ವ್ಯಾಪಾರಕ್ಕೋಸ್ಕರ ದೇವಾಲಯಗಳಿಗೆ ಹೋಗುತ್ತಾರೆ. ಈ ವ್ಯಾಪಾರ ಬುದ್ಧಿ ದೇವಾಲಯದ ಹೊರಗೆ ಮಾತ್ರ ಉಳಿಯದೆ ಒಳಗೂ ಪ್ರವೇಶಿಸಿ, ತೀರ್ಥಪ್ರಸಾದಗಳನ್ನೂ ಮಾರಾಟ ಮಾಡುವ ಸನ್ನಿವೇಶ ಉಂಟಾಗಿದೆ. ಕೆಲವರು ಸ್ನೇಹಿತರು ಸಂಬಂಧಿಕರು ಮುಂತಾದವರನ್ನು ಭೇಟಿಯಾಗಿ ಮಾತುಕತೆ ನಡೆಸಲು ದೇವಾಲಯಗಳಿಗೆ ಹೋಗುತ್ತಾರೆ. ತಮ್ಮ ವೇಷಭೂಷಣಗಳನ್ನು ಪ್ರದರ್ಶಿಸುವುದಕ್ಕೂ ದೇವಾಲಯಗಳಿಗೆ ಹೋಗುವವರಿದ್ದಾರೆ. ಪ್ರಾಪಂಚಿಕ ಸಮಸ್ಯೆಗಳ ಪರಿಹಾರಕ್ಕಾಗಿಯೇ ದೇವಾಲಯಗಳಿಗೆ ಹೋಗುವವರು ಮತ್ತನೇಕರು. ಅಪರೂಪಕ್ಕೆ ಕೆಲವರು ಮಾತ್ರ ಆಧ್ಯಾತ್ಮಿಕ ಉದ್ದೀಪನಕ್ಕಾಗಿ ದೇವಾಲಯಗಳಿಗೆ ಹೋಗುತ್ತಾರೆ. ಇಂಥವರು ತಾವು ಅಲ್ಲಿಯ ಸ್ಪಂದನವನ್ನು ಸವಿಯುವುದು ಮಾತ್ರವಲ್ಲದೆ, ಅಲ್ಲಿಯ ಆಧ್ಯಾತ್ಮಿಕ ಸ್ಪಂದನವನ್ನು ವೃದ್ಧಿಗೊಳಿಸುತ್ತಾರೆ, ದೇವಾಲಯವನ್ನು ನಿಜವಾದ ದೇವಾಲಯವನ್ನಾಗಿ ಮಾಡುತ್ತಾರೆ. ಕೇವಲ ಮೂರ್ತಿ ಪ್ರತಿಷ್ಠಾಪನೆ ಮಾಡಿದ ಮಾತ್ರಕ್ಕೆ ಒಂದು ಕಟ್ಟಡ ದೇವಾಲಯವಾಗುವುದಿಲ್ಲ. ಭಕ್ತರ ಭಕ್ತಿಭಾವದಿಂದ ಮೂರ್ತಿಯಲ್ಲಿ ಭಗವಂತನ ಆವಿರ್ಭಾವವಾಗುತ್ತದೆ – ಪ್ರಾಣಪ್ರತಿಷ್ಠೆಯಾಗುತ್ತದೆ.

ಅಮೆರಿಕದಲ್ಲಿ ಬಿಳಿಯರಿಗೆ ಮತ್ತು ಕರಿಯರಿಗೆ ಬೇರೆ ಬೇರೆ ಚರ್ಚುಗಳು ಇರುತ್ತಿದ್ದವಂತೆ. ಬಿಳಿಯರ ಚರ್ಚಿಗೆ ಕರಿಯರು ಹೋಗುವಂತಿಲ್ಲ, ಕರಿಯರ ಚರ್ಚಿಗೆ ಬಿಳಿಯರು ಹೋಗುತ್ತಲೇ ಇರಲಿಲ್ಲ. ಒಮ್ಮೆ ಒಂದು ಹಳ್ಳಿಯಿಂದ ಕರಿಯನೊಬ್ಬನು ಪಟ್ಟಣಕ್ಕೆ ಕೆಲಸದ ನಿಮಿತ್ತ ಹೋಗಿದ್ದ. ಕೆಲಸ ಮುಗಿದಾಗ ಸಂಜೆಯಾಗಿತ್ತು. ಅವನು ತುಂಬ ಧರ್ಮಿಷ್ಠ. ಅವನು ಸಂಜೆ ಪ್ರಾರ್ಥನೆಯನ್ನು ತಪ್ಪಿಸಿಕೊಳ್ಳುವಂತಿರಲಿಲ್ಲ. ಹತ್ತಿರದಲ್ಲಿದ್ದ ಒಂದು ಚರ್ಚಿಗೆ ಪ್ರಾರ್ಥನೆ ಮಾಡಲು ಹೋದ. ಮಧ್ಯದಲ್ಲಿ ಪಾದ್ರಿಯೊಬ್ಬರು ತಡೆದು, ''ಇದು ಬಿಳಿಯರ ಚರ್ಚು, ನಿನಗೆ ಪ್ರವೇಶವಿಲ್ಲ'', ಎಂದು ಹೇಳಿದರು. ಅವನು ತುಂಬ ಕೇಳಿಕೊಂಡ ಮೇಲೆ, ಪಾದ್ರಿಯವರು ಉಪಾಯದಿಂದ ಹೇಳಿದರು: ''ನೋಡಪ್ಪ, ನೀನು ಚರ್ಚಿಗೆ ಹೋಗಲು ನನ್ನದೇನೂ ಅಭ್ಯಂತರವಿಲ್ಲ. ನೀನು ಚರ್ಚಿನ ಮುಂದೆ ನಿಂತು, 'ನಾನು ಒಳಗೆ ಬರಬಹುದೇ' ಎಂದು ಕ್ರಿಸ್ತನನ್ನೇ ಕೇಳಿಕೊ. ಅವನು ಆಗಲಿ ಎಂದರೆ ಹೋಗು.'' ಕರಿಯನು ತುಂಬ ಬುದ್ಧಿವಂತ. ಅವನು ಚರ್ಚಿನ ಮುಂದೆ ಸ್ವಲ್ಪ ಹೊತ್ತು ನಿಂತು ಹೊರಟುಹೋಗುತ್ತಿದ್ದ. ಅವನನ್ನು ಪಾದ್ರಿಯವರು ಕರೆದು ''ಯೇಸುಕ್ರಿಸ್ತರು ಏನು ಹೇಳಿದರು?'' ಎಂದು ಕೇಳಿದರು. ''ಅವರು ಹೇಳಿದರು, 'ನಾನೇ ಇದುವರೆಗೆ ಚರ್ಚಿನೊಳಗೆ ಪ್ರವೇಶಮಾಡಿಲ್ಲ. ನೀನೇನೂ ಚಿಂತಿಸಬೇಕಾಗಿಲ್ಲ, ಹೋಗು' ಎಂದು.'' ಪಾದ್ರಿಯವರ ಮುಖದಲ್ಲಿ ಎಂತಹ ಪರಿವರ್ತನೆಯಾಗಿರಬಹುದು ಎಂಬುದು ಓದುಗರ ಊಹೆಗೆ ಬಿಟ್ಟಿದ್ದು.

ಇದು ಕ್ರೈಸ್ತಧರ್ಮಕ್ಕೆ ಸೀಮಿತವಾದ ಕಥೆಯೆಂದು ನಾವು ಖುಷಿಪಡಬೇಕಾಗಿಲ್ಲ. *(ಮುಂದುವರಿಯುವುದು)*

## ಯೋಗಕ್ಕೆ ವಿಘ್ನಗಳು

ಪತಂಜಲಿಯು ಯೋಗಕ್ಕೆ ಬರುವ ವಿಘ್ನಗಳನ್ನು ಕುರಿತು ಹೇಳುವನು. ಮನಸ್ಸನ್ನು ಚಂಚಲಗೊಳಿಸುವ ಪ್ರೇರಣೆಗಳಾವುವು? ಅವು ಕೆಳಗೆ ಹೇಳಿದಂತೆ ಇವೆ : ನಾವು ಕಾಯಿಲೆ ಬೀಳಬಹುದು, ಹುಚ್ಚರಾಗಬಹುದು. ಅಥವಾ ಮತ್ತಾವುದೋ ಅಪಾಯಕರವಾದ ದುರಭ್ಯಾಸಕ್ಕೆ ತುತ್ತಾಗಿ ಮುಂದುವರಿಯುವುದು ದುಃಸ್ಸಾಧ್ಯವಾಗುವುದು. ಆಲಸ್ಯ ಎಂದರೆ ಮನಸ್ಸು ವಿಶ್ರಾಂತಿ ಬಯಸುವುದು, ಅಥವಾ ಜಡವಾಗುವುದು. ಸಂದೇಹ, ಈ ವಸ್ತು ಈ ಬಗೆಗೆ ಸೇರಿದ್ದು ಹೌದೋ ಅಲ್ಲವೋ, ನಾವು ಹಿಡಿದಿರುವ ಈ ದಾರಿ ನಮಗೆ ಬೇಕಾದ ಫಲವನ್ನು ಕೊಡುವುದೋ ಇಲ್ಲವೋ ಎಂದು ವಿಚಾರ ಮಾಡುತ್ತಾ ಕುಳಿತಿರುವುದು. ಸಮಾಧಿ ಅಥವಾ ಯೋಗಕ್ಕೆ ಯಾವುದು ಒಯ್ಯುವುದೋ ಅದನ್ನು ಮಾಡದೇ ಇರುವುದೇ ಉದಾಸೀನತೆ. ತಾಮಸ ಅಥವಾ ಮಂದಬುದ್ಧಿ, ತೀವ್ರವಾಗಿ ಜಾಗೃತರಾಗದೆ ಇರುವುದು, ಶ್ರಮಪಡದೇ ಇರುವುದು ಸೋಮಾರಿತನ. ವಿಷಯವಸ್ತುಗಳ ಮೇಲಿನ ಆಕರ್ಷಣೆಯೇ ವ್ಯಾಮೋಹ. ಒಂದು ವಸ್ತುವನ್ನು ಮತ್ತೊಂದು ವಸ್ತುವೆಂದು ಭಾವಿಸುವುದೇ ಭ್ರಾಂತಿ. ಸಮಾಧಿಯ ಮೇಲ್ಮಟ್ಟವನ್ನು ಪಡೆಯದಿರುವುದೇ ಮತ್ತೊಂದು. ಅದೇ ಆಗಲೇ ಪಡೆದ ಸಮಾಧಿಯ ಒಂದು ಅವಸ್ಥೆಯಲ್ಲೇ ಸ್ಥಿರವಾಗಿ ನಿಲ್ಲಲು ಅಸಮರ್ಥವಾಗಿರುವುದು. ಇವು ಮನಸ್ಸನ್ನು ಚಂಚಲಗೊಳಿಸಿ ಯೋಗಕ್ಕೆ ಆತಂಕವಾಗುತ್ತವೆ. ಈ ಪ್ರತಿಬಂಧಕಗಳೆಲ್ಲ 'ಓಂ' ಶಬ್ದದ ಮೇಲೆ ಧ್ಯಾನಿಸುವುದರಿಂದ ದೂರವಾಗುವುವು.

*ಸ್ವಾಮಿ ತುರೀಯಾನಂದ*